ಬೆಲೆ ರೂ.2.50
D.O.P - 15th of every month at Udupi Head Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಜನವರಿ 2022

॥ ಧಿಯೋ ಯೋನಃ ಪ್ರಚೋದಯಾತ್ ॥

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2958444

ಸಂಪುಟ–22 ಸಂಚಿಕೆ–1 ಪುಟಗಳು–6 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಕರಂದಾಡಿ ಶಾನುಭಾಗ್ ಫ್ಯಾಮಿಲಿ ಟ್ರಸ್ಟ್ (ರಿ) : ದಶಮ ಸಂಭ್ರಮ



ಕಾಪು ಸಮೀಪದ ಕರಂದಾಡಿಯಲ್ಲಿ 10 ವರ್ಷಗಳ ಹಿಂದೆ ಪ್ರಾರಂಭಿಸಿದ ಕರಂದಾಡಿ ಶಾನುಭಾಗ್ ಫ್ಯಾಮಿಲಿ ಟ್ರಸ್ಟ್ (ರಿ) ಇದರ ದಶಮಾನೋತ್ಸವವನ್ನು ಕರಂದಾಡಿ ಪದ್ಮನಾಭ ಶಾನುಭಾಗ್ ಇವರ ಮನೆಯಲ್ಲಿ ತಾ.30.12.2021ರಂದು ನಡೆಸಲಾಯಿತು. ದಿನಪೂರ್ತಿ ನಡೆದ ಕಾರ್ಯಕ್ರಮದಲ್ಲಿ ಬೆಳಿಗ್ಗೆ ಸಭಾ ಕಾರ್ಯಕ್ರಮ, ಸನ್ಮಾನ, ತ್ರಿಕಾಲ ಪೂಜೆ, ಅನ್ನಸಂತರ್ಪಣೆ, ಭೋಜನಾ ನಂತರ ಸಾಂಸ್ಕೃತಿಕ ಕಾರ್ಯಕ್ರಮ, ಪ್ರಶಾಂತ್ ಕುಮಾರ್ ಮತ್ತು ಶ್ರೀಮತಿ ದೀಪ್ತಿ ಪ್ರಶಾಂತ್ ಬೆಂಗಳೂರು ಇವರಿಂದ ಸಂಗೀತ ರಸಮಂಜರಿ ಕಾರ್ಯಕ್ರಮ ಹಾಗೂ ಸಂಜೆ 6.30ರಿಂದ ಶ್ರೀಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮಿ ಕೃಪಾಪೋಶಿತ ಯಕ್ಷಗಾನ ಮಂಡಳಿ ಪಾವಂಜೆ ಇವರಿಂದ "ಶ್ರೀದೇವಿ ಮಹಾತ್ಮೆ" ಯಕ್ಷಗಾನ ಎಂಬ ಬಯಲಾಟ ಇತ್ಯಾದಿ ಕಾರ್ಯಕ್ರಮಗಳು ಜರಗಿದವು.

ಪೂರ್ವಾಹ್ನದ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರಂದಾಡಿ ಪಾಂಡುರಂಗ ಶಾನುಭಾಗ್ ಕೊಳ್ಳೆಗಾಲ ವಹಿಸಿದ್ದರು. ಉದ್ಘಾಟಕರಾಗಿದ್ದ ಯಾಜಿ ನಿರಂಜನ್ ಭಟ್ ಮಾತನಾಡಿ ಈ ಕುಟುಂಬದ ಹಿರಿಯರಾದ ವಾಸುದೇವರಾಯರು ಶಿಕ್ಷಕರಾಗಿದ್ದು ಎಲ್ಲಾ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದರು. ಮುಂದಕ್ಕೆ ಟ್ರಸ್ಟ್‌ನ್ನು ಸ್ಥಾಪಿಸಿದ ಅವರು ಎಲ್ಲರನ್ನೂ ಒಗ್ಗೂಡಿಸಿಕೊಂಡು ಸಂಸ್ಥೆಯನ್ನು ಮುನ್ನಡೆಸಿದರು. ಅವರ ಪುತ್ರ ಪದ್ಮನಾಭ ಶಾನುಭಾಗ್ ಈಗ ನಿರಂತರವಾಗಿ ಈ ಮನೆಯಲ್ಲಿ ಕಾರ್ಯಕ್ರಮಗಳನ್ನು ಎಲ್ಲರ ಸಹಕಾರದಿಂದ ನಡೆಸುತ್ತಿದ್ದಾರೆ ಎಂದು ನುಡಿದು ಶುಭ ಹಾರೈಸಿದರು.

ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿದ ಶ್ರೀ ಸುಬ್ರಹ್ಮಣ್ಯ ಮಂಜಿತ್ತಾಯರು ಮಾತನಾಡಿ ಕುಟುಂಬಕ್ಕೆ ಸಂಬಂಧಿಸಿದ ದೇವಸ್ಥಾನದಲ್ಲಿ ತಾನು ಅರ್ಚಕನಾಗಿದ್ದು ಇವರ ಎಲ್ಲಾ ಧಾರ್ಮಿಕ ಕಾರ್ಯಕ್ರಮ ಹಾಗೂ ಇತರ ಎಲ್ಲಾ ಚಟುವಟಿಕೆಗಳು ಅಭಿನಂದನಾರ್ಹವಾಗಿವೆ ಎಂದು ಪ್ರಶಂಸಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಧಾರ್ಮಿಕ ದತ್ತಿ ಇಲಾಖೆಯ ಸದಸ್ಯರಾಗಿದ್ದ ಹಾಗೂ ಪುತ್ತೂರು ದೇವಸ್ಥಾನದ ಆಡಳಿತ ಮೊಕ್ತೇಸರರಾಗಿದ್ದ ಎನ್.ಕೆ.ಜಗನ್ನಿವಾಸ ರಾಯರು ನಿರಂತರವಾಗಿ ಧಾರ್ಮಿಕ ಕಾರ್ಯಕ್ರಮಗಳು ಹಾಗೂ ಸನ್ಮಾನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಡೆಸಿಕೊಂಡು ಬಂದಿರುವ ಟ್ರಸ್ಟಿನ ಎಲ್ಲಾ ಸದಸ್ಯರನ್ನು ಶ್ಲಾಘಿಸಿದರು. ಇನ್ನೋರ್ವ ಅತಿಥಿ ಶ್ರೀ ಶಾರದಾ ಮಂಟಪದ ಅಧ್ಯಕ್ಷರಾದ ಕೆ.ಮಂಜುನಾಥ ಹೆಬ್ಬಾರ್ ಮಾತನಾಡಿ ಇಲ್ಲಿಯ ವ್ಯವಸ್ಥೆ, ದೈವ ದೇವರ ಕಾರ್ಯಕ್ರಮಗಳು ಹಾಗೂ ಇವರು ನಡೆಸಿಕೊಂಡು ಬರುತ್ತಿರುವ ಧಾರ್ಮಿಕ ಹಾಗೂ ಸಾಮಾಜಿಕ ಚಟುವಟಿಕೆಗಳನ್ನು ನೋಡಿದಾಗ ನಮ್ಮ ಕಬ್ಬಿನಾಲೆ ಕಚ್ಚೂರಿನ ಮನೆಯ ನೆನಪಾಗುತ್ತಿದೆ. ಎಲ್ಲರನ್ನು ಸೇರಿಸಿಕೊಂಡು ಕುಟುಂಬದ ಸದಸ್ಯರು ನಡೆಸಿಕೊಂಡು ಬರುವ ಈ ಕಾರ್ಯಕ್ರಮ ನಿರಂತರವಾಗಿ ನಡೆಯಲಿ ಎಂದು ಶುಭ ಹಾರೈಸಿದರು. ಬೆಂಗಳೂರಿನ ಉದ್ಯಮಿ ಎ.ಬಿ.ಷಾ ಮಾತನಾಡುತ್ತಾ ಇಲ್ಲಿಯ ಕಾರ್ಯಕ್ರಮಗಳಿಂದ ಸಂತೋಷಗೊಂಡಿದ್ದೇನೆ. ಈ ಟ್ರಸ್ಟ್‌ನ ಸದಸ್ಯರಿಗೆ ಆರೋಗ್ಯ ವಿಮೆ ಮಾಡುವ ಬಗ್ಗೆ ತಾನು ದೇಣಿಗೆ ನೀಡುವುದಾಗಿ ತಿಳಿಸಿದರು. ಸಭಾಧ್ಯಕ್ಷತೆ ವಹಿಸಿದ್ದ ಪಾಂಡುರಂಗ ಶ್ಯಾನುಭಾಗರು ಎಲ್ಲರನ್ನು ಅಭಿನಂದಿಸುತ್ತಾ ತನಗೆ ಸಹಕಾರ ನೀಡಿದ ಕುಟುಂಬದ ಎಲ್ಲರಿಗೆ ಕೃತಜ್ಞತೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಹಲವಾರು ಗಣ್ಯರಿಗೆ ಹಾಗೂ ಶಾನುಭಾಗ್ ಮನೆಯ ದೈವದ ಪರಿಚಾರಕ ವರ್ಗದವರಿಗೆ ವೇದಿಕೆಯಲ್ಲಿದ್ದವರು ಗೌರವಿಸಿ ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಕಟಪಾಡಿ ಅಶೋಕ್ ರಾವ್ ಸ್ವಾಗತಿಸಿದರು. ಗೀತಾ ಅನಂತಪದ್ಮನಾಭ ಕೊಟ್ಟಾರಿ ಪೆರ್ಡೂರು ಧನ್ಯವಾದ ನೀಡಿದರು. ನಿರ್ಮಲ ಕುಮಾರ್ ಹೆಗ್ಡೆ ನಿರೂಪಿಸಿದರು. ಪ್ರಜ್ಞಾ ಮಾರ್ಪಳ್ಳಿ ಪ್ರಾರ್ಥನೆಗೈದರು.

ವೇದಿಕೆಯಲ್ಲಿ ವಾಸುದೇವ ರಾವ್ ಕುಕ್ಕೆಹಳ್ಳಿ, ಸುಬ್ರಹ್ಮಣ್ಯ ರಾವ್ ಕಟಪಾಡಿ, ಪದ್ಮನಾಭ ಶಾನುಭಾಗ್, ರಾಜಶೇಖರ ರಾವ್, ಗೀತಾ ಅನಂತಪದ್ಮನಾಭ ರಾವ್ ಕೊಟ್ಟಾರಿ, ಶಶೀಂದ್ರ ರಾವ್, ಆಡಳಿತ ಮೊಕ್ತೇಸರರು, ಪಾವಂಜೆ ದೇವಸ್ಥಾನ, ವಿಶ್ವಜಿತ್ ಶೆಟ್ಟಿ, ಆಡಳಿತ ಮೊಕ್ತೇಸರರು, ವಿಷ್ಣುಮೂರ್ತಿ ದೇವಸ್ಥಾನ ಕರಂದಾಡಿ ಮೊದಲಾದವರು ಉಪಸ್ಥಿತರಿದ್ದರು.

### ಸ್ಥಾನಿಕ ಬ್ರಾಹ್ಮಣ ಸಂಘ (ರಿ), ಕುಂಜಿಬೆಟ್ಟು, ಉಡುಪಿ–576102

**ಸ್ಥಾನಿಕ ಬ್ರಾಹ್ಮಣ ಸಂಘ (ರಿ), ಉಡುಪಿ ಇದರ ಆಜೀವ ಸದಸ್ಯರ ವಿಳಾಸ ತಿದ್ದುಪಡಿ/ಸರಿಪಡಿಸುವಿಕೆಯನ್ನು ಮಾಡುತ್ತಿದ್ದು ಸದಸ್ಯರೆಲ್ಲರೂ ಅಗತ್ಯವಾಗಿ ತಮ್ಮ ಪ್ರಸ್ತುತ ವಿಳಾಸವನ್ನು ತಿಳಿಸುವಂತೆ ಕೋರಲಾಗಿದೆ. ಈಗಿನ ಆಜೀವ ಸದಸ್ಯತನ ಶುಲ್ಕ ರೂ.1000 ಆಗಿದ್ದು ಹಿಂದೆ ರೂ.100 ನೀಡಿ ಸದಸ್ಯರಾದವರು ಸದಸ್ಯತನದ ಶುಲ್ಕದ ವ್ಯತ್ಯಾಸ ರೂ.900ಗಳನ್ನು ನೀಡಿ ತಮ್ಮ ಸದಸ್ಯತ್ವವನ್ನು ಉನ್ನತೀಕರಿಸಲು (Upgrade) ವಿನಂತಿಸಲಾಗಿದೆ.**

**ಸಂಘದ ಸದಸ್ಯರೆಲ್ಲರೂ ತಮ್ಮ ಹೆಸರು, ವಿಳಾಸ, ಭಾವಚಿತ್ರ, ಮೊಬೈಲ್ ನಂ, ವಾಟ್ಸಪ್ ನಂ, ಇ–ಮೇಲ್ ವಿಳಾಸ, ಸದಸ್ಯತ್ವ ಸಂಖ್ಯೆ ಅಗತ್ಯವಾಗಿ ನೀಡಲು ತಿಳಿಸಲಾಗಿದೆ.**

ಮಾಹಿತಿ ಕಳುಹಿಸಬೇಕಾದ ಸಂಪರ್ಕ ಸಂಖ್ಯೆ : ಸಂಘದ ಕಛೇರಿ, ಶ್ರೀ ಶಾರದಾ ಮಂಟಪ–8971185844, ಪಿ. ಪ್ರಭಾಕರ ಭಂಡಿ, ಕಾರ್ಯದರ್ಶಿ–9449254846, ವಿನೋದ್ ಕುಮಾರ್, ಜೊತೆ ಕಾರ್ಯದರ್ಶಿ–9964896319, ಮಧುಚಂದ್ರ ಕೊಟ್ಟಾರಿ–9148979908, ಆದರ್ಶ ಕುಮಾರ್–(9611186866)

## ಸ್ಥಾನಿಕ ಬ್ರಾಹ್ಮಣ ಮಹಾಮಂಡಲದಿಂದ ಗೌರವಾರ್ಪಣೆ



ಇತ್ತೀಚೆಗೆ ಮಂಗಳೂರು ಸುಬ್ರಹ್ಮಣ್ಯ ಸಭಾದಲ್ಲಿ ಕರ್ನಾಟಕ ಬ್ಯಾಂಕಿನ ಅಧ್ಯಕ್ಷರಾಗಿ ನಿಯೋಜನೆಗೊಂಡ ನಮ್ಮ ಸಮಾಜದ ಶ್ರೀ ಪಂಜ ಪ್ರದೀಪ್ ಕುಮಾರ್ ಇವರನ್ನು ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ವತಿಯಿಂದ ಅಭಿನಂದಿಸಿ ಗೌರವಿಸಲಾಯಿತು. ಮಹಾಮಂಡಲದ ಅಧ್ಯಕ್ಷರಾದ ಎಮ್. ದೇವಾನಂದ್ ಭಟ್ ಅವರ ಅಧ್ಯಕ್ಷತೆಯಲ್ಲಿ ಜರಗಿದ ಈ ಸಭೆಯಲ್ಲಿ ಬೆಳ್ತಂಗಡಿ ಶ್ರೀ ಬಿ.ಕೆ. ಧನಂಜಯ್ ರಾವ್ ಪ್ರದೀಪ್ ಕುಮಾರ್ ಅವರ ಬಗ್ಗೆ ಅಭಿನಂದನಾ ಭಾಷಣ ಮಾಡಿದರು. ಅನೇಕ ಸಂಘ ಸಂಸ್ಥೆಗಳವರು ಶ್ರೀ ಪಂಜ ಅವರನ್ನು ಶಾಲು ಸ್ಮರಣಿಕೆ ನೀಡಿ ಗೌರವಿಸಿದರು.

ಮಹಾಮಂಡಲದ ಸದಸ್ಯತ್ವ ನೀಡಿ ನೋಂದಾಯಿಸಿಕೊಂಡ ಬಂಟ್ವಾಳ ಸಂಘ, ಅರ್ಚಕ ಪುರೋಹಿತ ಪರಿಪಾಲನಾ ಸಂಘ ಇವರನ್ನು ಈ ಸಭೆಯಲ್ಲಿ ಅಭಿನಂದಿಸಲಾಯಿತು. ಬಳಿಕ ನಡೆದ ಎಲ್ಲಾ ಸಂಘಗಳ ಪ್ರತಿನಿಧಿಗಳ ಸಭೆಯಲ್ಲಿ ನಮ್ಮ ಸಮಾಜದ ದೇವಸ್ಥಾನದ ಅಭಿವೃದ್ಧಿಯ ಬಗ್ಗೆ ಹಾಗೂ ಮುಂದಿನ ವರ್ಷದ ಸಮಾವೇಶವನ್ನು ಜರಗಿಸುವ ಬಗ್ಗೆ ವಿಚಾರ ವಿನಿಮಯ ಮಾಡಲಾಯಿತು. ಈ ಸಭೆಯಲ್ಲಿ ಕಾರ್ಯದರ್ಶಿಗಳಾದ ಡಾ.ವೈ. ಸುದರ್ಶನ್ ರಾವ್ ಎಲ್ಲರನ್ನು ಸ್ವಾಗತಿಸಿದರು. ಮಂಡಲದ ಉಪಾಧ್ಯಕ್ಷರಾದ ಉದಯ ಬಾರ್ಕೂರು ಧನ್ಯವಾದವನ್ನಿತ್ತರು. ಜೊತೆ ಕಾರ್ಯದರ್ಶಿ ನಿಟ್ಟೆ ಮುರಳಿಧರ ಶರ್ಮ ಕಾರ್ಯಕ್ರಮ ನಿರೂಪಿಸಿದರು.

### ಸ್ಥಾನಿಕ ಬ್ರಾಹ್ಮಣ ಸಂಘ (ರಿ)

**ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576102**

**ವಿವಿಧ ವೇದಿಕೆಗಳ ಪದಾಧಿಕಾರಿಗಳು**

**ಯುವ ಮತ್ತು ಕ್ರೀಡಾ ವೇದಿಕೆ :** ಸಂತೋಷ್ ಎಂ.ರಾವ್, ಚಿಟ್ಪಾಡಿ (ಅಧ್ಯಕ್ಷರು), ಆದರ್ಶ ಕುಮಾರ್ (ಕಾರ್ಯದರ್ಶಿ), ಸದಸ್ಯರು : ಮಧುಚಂದ್ರ ಕೊಟ್ಟಾರಿ, ನೀಲಾವರ ಅಭ್ಯುದಯ ಕುಮಾರ್

**ಮಹಿಳಾ ವೇದಿಕೆ :** ಡಾ। ವಿಜಯ ರಾವ್ ವೈ.ಬಿ. (ಅಧ್ಯಕ್ಷರು), ಜ್ಯೋತಿ ಸಂತೋಷ್ ರಾವ್ (ಕಾರ್ಯದರ್ಶಿ)

**ಶ್ರೀ ಶಾರದಾ ಪತ್ರಿಕೆ ವೇದಿಕೆ :** *ಸಂಪಾದಕ ಮಂಡಳಿ :* ಯು.ಅರವಿಂದ ಕುಮಾರ್ (ಪ್ರಧಾನ ಸಂಪಾದಕರು), ಟಿ. ಸುರೇಶ್ ರಾವ್, ಬಿ. ಸುರೇಶ್ ಶಾನುಭಾಗ್, ಡಾ। ವಿಜಯ ರಾವ್ ವೈ.ಬಿ., ಮಧುಸೂದನ ರಾವ್, ಕುಂಜಾರುಗಿರಿ.

*ಗೌರವ ಸಲಹೆಗಾರರು :* ವೈ. ಭುವನೇಂದ್ರ ರಾವ್, ಕೆ. ವೇಣುಗೋಪಾಲ್ ರಾವ್

**ದೇವಸ್ಥಾನ ವೇದಿಕೆ :** ಕೊಕ್ರಾಡಿ ಸುರೇಶ್ ರಾವ್ ಕುತ್ಪಾಡಿ

**ವೈದ್ಯಕೀಯ ವೇದಿಕೆ :** ಡಾ। ಶಾಮರಾವ್ (ಅಧ್ಯಕ್ಷರು), ಡಾ। ವೈ.ಸುದರ್ಶನ ರಾವ್, ಡಾ। ಸುಬ್ರಹ್ಮಣ್ಯ ರಾವ್, ಡಾ। ಸ್ವರ್ಣಲತಾ, ಡಾ। ಸಂಜಾತ ಎ.ಎಸ್., ಸತೀಶ್ ಹೆಬ್ಬಾರ್ ಕೆ, ವಿನೋದ್ ಕುಮಾರ್

**ಕಲೆ ಮತ್ತು ಸಂಸ್ಕೃತಿ ವೇದಿಕೆ :** ಕೃಷ್ಣಮೂರ್ತಿ ಬಿ. ಬ್ರಹ್ಮಾವರ (ಅಧ್ಯಕ್ಷರು), ಸತೀಶ್ ರಾವ್ ಚಿಟ್ಪಾಡಿ

**ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ :** ಕೃಷ್ಣಕುಮಾರ್ ಮಟ್ಟು (ಅಧ್ಯಕ್ಷರು), ಯು.ಅರವಿಂದಕುಮಾರ್, ಬಿ. ಕೃಷ್ಣಮೂರ್ತಿ ರಾವ್ ಅಂಬಲಪಾಡಿ, ಐ.ಕೆ. ಜಯಚಂದ್ರ ರಾವ್, ಪ್ರಕಾಶ್ ಕೋಲ್ಪೆ

**ಆಂತರಿಕ ಲೆಕ್ಕಪರಿಶೋಧನಾ ವೇದಿಕೆ :** ಬಿ. ಸುರೇಶ್ ಶಾನುಭಾಗ್

**ಊಟೋಪಚಾರ ವೇದಿಕೆ :** ಟಿ. ಜಗದೀಶ ರಾವ್ ನಿಟ್ಟೂರು, ಸಿ. ದಿವಾಕರ್ ರಾವ್

ಅಲ್ಲದೇ ಸಂಘದಲ್ಲಿ ಆಡಳಿತ ಮಂಡಳಿಯ ಸದಸ್ಯರೊಂದಿಗೆ ಸಲಹೆಗಾರರಾಗಿ ಶ್ರೀ ಎ.ರಮೇಶ ಶ್ಯಾನುಭಾಗ್, ಡಾ॥ ಪಿ.ವಿಠಲ್ ರಾವ್, ಶ್ರೀ ಎಮ್. ಪಾಲಚಂದ್ರರಾವ್, ಶ್ರೀ ಸಿ.ಎಸ್. ರಾವ್, ಶ್ರೀ ಯು.ಪ್ರಫುಲ್ಲಚಂದ್ರರಾವ್, ಶ್ರೀ ವೈ.ಭುವನೇಂದ್ರ ರಾವ್ ಮತ್ತು ವೈದಿಕ ಸಲಹೆಗಾರರಾಗಿ ಬ್ರಹ್ಮಶ್ರೀ ಪಿ.ವಾಗೀಶ ಶಾಸ್ತ್ರಿ, ಕೃಷ್ಣಮೂರ್ತಿ ರಾವ್ ಅಂಬಲಪಾಡಿ ಇರುತ್ತಾರೆ.

ಉಡುಪಿಯ ಶ್ರೀ ಶಾರದಾ ಸ್ಥಾನಿಕ ಸಂಘದ ಮಹಿಳಾ ವೇದಿಕೆಯು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಹಲವಾರು ವರ್ಷಗಳಿಂದ ಎಲ್ಲಾ ರೀತಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ. ಮಹಿಳಾ ವೇದಿಕೆಯು ಇತ್ತೀಚೆಗೆ ಬೆಳ್ತಂಗಡಿ ಸ್ಥಾನಿಕ ರಜತ ಮಹೋತ್ಸವದಲ್ಲಿ ನಡೆದ ಭಜನಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದು ಹಾಗೂ ಕಡಿಯಾಳಿ ಕೃಷ್ಣಪ್ರಜ್ಞಾ ಮಂದಿರದಲ್ಲಿ ಭಜನಾ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನಗಳಿಸಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ. ಈ ವೇದಿಕೆಯನ್ನು ಇನ್ನಷ್ಟು ಸಶಕ್ತಗೊಳಿಸಲು ಸ್ಥಾನಿಕ ಮಹಿಳಾ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರಾಗಬೇಕು ಹಾಗೂ ತಮ್ಮ ಸಲಹೆ ಅಭಿಪ್ರಾಯಗಳನ್ನು ನೀಡಬೇಕೆಂದು ವಿನಂತಿಸಲಾಗಿದೆ. **–ಅಧ್ಯಕ್ಷರು, ಮಹಿಳಾ ವೇದಿಕೆ.**

## ಸಂಪಾದಕೀಯ....



ಯು.ಅರವಿಂದ ಕುಮಾರ್

21 ವರ್ಷಗಳ ಹಿಂದೆ ಪ್ರಾರಂಭಗೊಂಡ "ಶ್ರೀ ಶಾರದಾ" ಪತ್ರಿಕೆಯನ್ನು ಆಗಿನ ನಮ್ಮ ಸಂಘದ ಗೌರವಾಧ್ಯಕ್ಷರಾಗಿದ್ದ ಅಂಬಲ್ಪಾಡಿ ಕೃಷ್ಣರಾವ್ ಬಿಡುಗಡೆಗೊಳಿಸಿ ಯುವ ವಿಭಾಗವು ನಡೆಸುತ್ತಿದ್ದ ಪತ್ರಿಕೆಯನ್ನು ಪ್ರೋತ್ಸಾಹಿಸಿದರು. ಹಾಗೆಯೇ ಹಿರಿಯರುಗಳಾದ ಡಾ| ಪಿ.ವಿಠಲರಾವ್, ಎಮ್. ಪಾಲಚಂದ್ರರಾವ್, ಎನ್.ಎ.ಪಿ.ಭಟ್, ಸಿ.ಎಸ್.ರಾವ್ ಹಾಗೂ ಎಮ್.ಸದಾನಂದ ರಾವ್ ಇವರೆಲ್ಲರೂ ನಮ್ಮನ್ನು ಹುರಿದುಂಬಿಸಿದರು. ಹಿಂದಿನ ಯುವವಿಭಾಗದವರ ಶ್ರಮದ ಫಲವಾಗಿ ಪತ್ರಿಕೆಯು ಎಲ್ಲರ ಮನೆ ತಲುಪುವಂತಾಗಿದೆ. ಹಿಂದಿನ ಸಂಪಾದಕ ಮಂಡಳಿ ಹಾಗೂ ಪ್ರಧಾನ ಸಂಪಾದಕರಾಗಿ ಪತ್ರಿಕೆಯನ್ನು ನಡೆಸಿಕೊಂಡು ಬಂದ ವೈ. ಮುರಳೀಕೃಷ್ಣ ರಾವ್, ಕೆ. ವೇಣುಗೋಪಾಲ ರಾವ್, ವೈ. ಮೋಹನ್ ರಾವ್ ಹಾಗೂ ಕೃಷ್ಣಕುಮಾರ್ ಮಟ್ಟು ಇವರ ನಿಸ್ವಾರ್ಥ ಸೇವೆಯನ್ನು ಸ್ಮರಿಸುತ್ತೇನೆ. ಕಳೆದ 6 ವರ್ಷಗಳಿಂದ ಡಾ| ವೈ.ಸುದರ್ಶನ ರಾವ್ ಪ್ರಧಾನ ಸಂಪಾದಕರಾಗಿ ಪತ್ರಿಕೆಯನ್ನು ನಡೆಸಿಕೊಂಡು ಬಂದಿದ್ದು ಅವರೊಂದಿಗೆ ಸಂಪಾದಕ ಮಂಡಳಿಯಲ್ಲಿ ಸದಸ್ಯರಾಗಿ ವೈ.ಭುವನೇಂದ್ರ ರಾವ್, ಬಿ.ಸುರೇಶ ಶಾನುಭಾಗ್, ಟಿ.ಸುರೇಶ್ ರಾವ್, ಪ್ರಭಾಕರ ಭಂಡಿಯವರು ಪತ್ರಿಕೆ ಉತ್ತಮವಾಗಿ ಮೂಡಿ ಬರಲು ಸಹಕರಿಸಿದ್ದರು. ಸಂಘದ ಅಧ್ಯಕ್ಷರು, ಆಡಳಿತ ಮಂಡಳಿ, ಅಲ್ಲದೇ ಪತ್ರಿಕೆಗೆ ಜಾಹೀರಾತು, ಲೇಖನ ನೀಡುತ್ತಿರುವವರಿಗೂ, ಮುದ್ರಣಕಾರರಿಗೂ, ಪ್ರತ್ಯಕ್ಷ, ಪರೋಕ್ಷವಾಗಿ ಸಹಕರಿಸುತ್ತಿರುವ ಎಲ್ಲರಿಗೂ ತುಂಬುಹೃದಯದ ಧನ್ಯವಾದಗಳು. ನಿಮ್ಮೆಲ್ಲ ಓದುಗರ ಪ್ರೋತ್ಸಾಹದೊಂದಿಗೆ ಸುಮಾರು 1600 ಮನೆಗಳಿಗೆ ಶ್ರೀ ಶಾರದಾ ಪತ್ರಿಕೆ ತಲುಪಲು ಸಾಧ್ಯವಾಗಿದೆ. ಈ ಬಾರಿ ಪತ್ರಿಕೆಯ ಜವಾಬ್ದಾರಿಯನ್ನು ಸಂಘವು ನಮ್ಮ ಸಂಪಾದಕ ಮಂಡಳಿಗೆ ನೀಡಿದೆ. ಮುಂದೆಯೂ ತಮ್ಮೆಲ್ಲರ ಸಹಕಾರವನ್ನು ನಿರೀಕ್ಷಿಸುತ್ತಿದ್ದೇವೆ.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಶ್ರೀ ಶಾರದಾ ಪತ್ರಿಕೆಯ ಆಜೀವ ಚಂದಾದಾರರಾಗಿ ಪತ್ರಿಕೆಯನ್ನು ಪೋಷಿಸಿ, ಬೆಳೆಸಿ, ಮುನ್ನಡೆಸಬೇಕಾಗಿ ವಿನಂತಿ.


**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ| ಶ್ರೀಮತಿ ವಿಜಯ ರಾವ್ ವೈ.ಬಿ.

★★★★ ★★★★

ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ


## ಹದಿನಾಲ್ಕು ವರ್ಷದೊಳಗಿನ ಕರ್ನಾಟಕ ರಾಜ್ಯದ ಕ್ರಿಕೆಟ್ ತಂಡಕ್ಕೆ ಆಲ್‌ರೌಂಡರ್ ಆಗಿ ಬಿ.ಎಚ್. ಪ್ರಣವ್ ರಾವ್



ಕದ್ರಿಯ ಹರಿಪ್ರಸಾದ್ ರಾವ್ ಮತ್ತು ಸ್ವರ್ಣಗೌರಿ ದಂಪತಿಗಳ ಸುಪುತ್ರ ಬಿ.ಎಚ್. ಪ್ರಣವ್ ರಾವ್, ನ್ಯಾಷನಲ್ ಕ್ರಿಕೆಟ್ ಲೀಗ್ (NCL India) ನಿಂದ ಆರಿಸಲ್ಪಟ್ಟ ಹದಿನಾಲ್ಕು ವರ್ಷದೊಳಗಿನ ಕರ್ನಾಟಕ ರಾಜ್ಯದ ಕ್ರಿಕೆಟ್ ತಂಡಕ್ಕೆ ಆಲ್ ರೌಂಡರ್ ಆಗಿ ಆಯ್ಕೆಯಾಗಿರುತ್ತಾರೆ. ಇದರ ಎರಡನೇ ಹಂತದ ಆಯ್ಕೆಯ ಪ್ರಕ್ರಿಯೆಯು ಅಕ್ಟೋಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆದಿತ್ತು. ಇನ್ನು 2022 ಫೆಬ್ರವರಿ ತಿಂಗಳಲ್ಲಿ ಉತ್ತರ ಭಾರತದಲ್ಲಿ ನಡೆಯುವ ರಾಷ್ಟ್ರಮಟ್ಟದ ಅಂತರ್ ರಾಜ್ಯ ಕ್ರಿಕೆಟ್ ಪಂದ್ಯಗಳಲ್ಲಿ ಕರ್ನಾಟಕವನ್ನು ಇವರು ಪ್ರತಿನಿಧಿಸಲಿದ್ದಾರೆ. 20 ರಾಜ್ಯಗಳ ಟ್ರೋಫಿ ಪಡೆಯಲು ನಡೆಸುವ ಪಂದ್ಯಾವಳಿಯ ಕೊನೆಯ ಪಂದ್ಯವು ದೆಹಲಿಯಲ್ಲಿ ನಡೆಯಲಿದ್ದು, ಬಹುಮಾನ ವಿತರಣಾ ಸಮಾರಂಭದಲ್ಲಿ ಸಚಿನ್ ತೆಂಡೂಲ್ಕರ್ ಹಾಗೂ ಕಪಿಲ್ ದೇವ್ ಭಾಗವಹಿಸುವ ನಿರೀಕ್ಷೆಯಿದೆ. ಪ್ರಣವ್ ಕ್ರಿಕೆಟ್‌ನ ತರಬೇತಿಯನ್ನು ಮೊದಲಿಗೆ ತಂದೆಯಿಂದ, ನಂತರ ಬಲ್ಮಠದ ಮಂಗಳೂರು ಕ್ರಿಕೆಟ್ ಅಕಾಡೆಮಿಯ (MCA) ಶ್ರೀ ರಾಜರತ್ನ ಇವರಲ್ಲಿ ಪಡೆಯುತ್ತಿದ್ದಾರೆ. ಇದಲ್ಲದೇ ಕಳೆದ ವಾರದಿಂದ ಹೆಚ್ಚಿನ ತರಬೇತಿಯನ್ನು ಮಂಗಳೂರು ಕ್ರಿಕೆಟ್ ಇಂಡಿಯಾ ಅಕಾಡೆಮಿ (MCIA)ಯಿಂದ ಸೈಂಟ್ ಅಲೋಶಿಯಸ್ ಸೆಂಟಿನರಿ ಮೈದಾನದಲ್ಲಿ ಪಡೆಯುತ್ತಿದ್ದಾರೆ.



ಬೆಳ್ತಂಗಡಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾದ "ರಜತ ಸಂಭ್ರಮ" ಅಂಗವಾಗಿ ಜರುಗಿದ ವಿಪ್ರ ಭಜನಾ ಸಾಮ್ರಾಟ್ ಭಜನಾ ಸ್ಪರ್ಧೆಯಲ್ಲಿ ಭಾಗವಹಿಸಿದ ಕುಂಜಿಬೆಟ್ಟು ಶ್ರೀ ಶಾರದಾ ಭಜನಾ ಮಂಡಳಿಯ ಸದಸ್ಯರು

## ನೀತಿ ಆಯೋಗ ಕಾರ್ಯದಳದ ಸದಸ್ಯರಾಗಿ ಡಾ. ವೈ. ಅವನೀಂದ್ರನಾಥ್ ರಾವ್



ಕೇಂದ್ರ ಸರ್ಕಾರದ ಸಚಿವಾಲಯದ ವಿವಿಧ ಗ್ರಂಥಾಲಯದ ಬಲವರ್ಧನೆಗಾಗಿ ನೀತಿ ಆಯೋಗ ಕಾರ್ಯದಳವನ್ನು ರಚಿಸಿದರು. ಇದರ ಸದಸ್ಯರಾಗಿ ದೆಹಲಿಯ ಕೇಂದ್ರ ಸ ಚಿವಾಲಯ ಗ್ರಂಥಾಲಯದ ಅಧಿಕಾರಿ ಆಗಿರುವ ನಮ್ಮ ಸಮಾಜದ ಡಾ. ವೈ. ಅವನೀಂದ್ರನಾಥ್ ರಾವ್ ಅವರನ್ನು ನೇಮಕ ಮಾಡಲಾಗಿದೆ. ಮೂಲತಃ ಇವರು ಉಡುಪಿ ಜಿಲ್ಲೆಯ ಎಲ್ಲೂರಿನವರಾಗಿದ್ದಾರೆ. ಮಂಗಳೂರು ಆಕಾಶವಾಣಿಯಲ್ಲಿ ನಿರೂಪಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಬಹುಮುಖ ಪ್ರತಿಭೆಯ ಇವರು ಕಳೆದ 2 ದಶಕಗಳಿಂದ ದೆಹಲಿಯಲ್ಲಿ ಸಾಹಿತ್ಯ, ಸಂಘಟನೆ, ನಾಟಕ, ಸಂಶೋಧನೆಯಲ್ಲಿ ತೊಡಗಿಸಿಕೊಂಡು ಕ್ರಿಯಾಶೀಲರಾಗಿದ್ದಾರೆ.

## ತೀರಾ ಅಶಕ್ತ ರೋಗಿಗಳ ಶುಶ್ರೂಷೆಗೆ ಸೇವಾ ತಂಡ ರಚನೆ

ಉಡುಪಿಯ ಅಲಂಕಾರ್ ಥಿಯೇಟರ್ ಹಿಂಬದಿ ಎ.ಜೆ.ಅಲ್ಸೆ ರಸ್ತೆಯಲ್ಲಿರುವ ಇಂಚರ ಸರ್ಜಿಕಲ್ ಕ್ಲಿನಿಕ್ ನ ಸಂಚಾಲಕತ್ವದಲ್ಲಿ ಹಾಗೂ ಡಾ| ವೈ. ಸುದರ್ಶನ ರಾವ್ ನೇತೃತ್ವದ ಶ್ರೀ ಎಲ್ಲೂರು ಲಕ್ಷ್ಮೀ ನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್‌ನ ಸಹಯೋಗದೊಂದಿಗೆ ಉಡುಪಿ ಪರಿಸರದಲ್ಲಿನ ತೀರಾ ಅಶಕ್ತ ಹಾಗೂ ಆಸ್ಪತ್ರೆಗೆ ತೆರಳಾಗದ ಪರಿಸ್ಥಿತಿಯಲ್ಲಿರುವ ರೋಗಿಗಳ ಶುಶ್ರೂಷೆಯನ್ನು ಅವರವರ ನಿವಾಸದಲ್ಲಿಯೇ ಒದಗಿಸುವ ಉದ್ದೇಶದಿಂದ ಸೇವಾ ತಂಡವೊಂದನ್ನು ರಚಿಸಲಾಗಿದೆ. ಈ ಸೇವಾತಂಡದಲ್ಲಿ ಓರ್ವ ಪರಿಣಿತ ಶುಶ್ರೂಷಕರು, (ನರ್ಸ್) ಹಾಗೂ ಓರ್ವ ಸಹಾಯಕರಿದ್ದು ಅವರಿಗೆ ದಿ| ಕಾಪು ಮೋಹನ್ ರಾವ್ ಹಾಗೂ ಅವರ ಪತ್ನಿ ದಿ| ರೋಹಿಣಿ ಬಾಯಿ ಸ್ಮರಣಾರ್ಥ ಒಂದು ಅಂಬ್ಯುಲೆನ್ಸನ್ನು ಒದಗಿಸಲಾಗಿದೆ. ತಂಡವು ಡಾ| ವೈ. ಸುದರ್ಶನ ರಾವ್ ರವರ ಮಾರ್ಗದರ್ಶನದಲ್ಲಿ ಗ್ಲುಕೋಸ್/ಸಲೈನ್ ದ್ರಾವಣ ಅಳವಡಿಕೆ, ಬೆಡ್ ಸೋರ್ (bed sore) ಇತ್ಯಾದಿ ದೇಹದ ವ್ರಣಗಳ ಬ್ಯಾಂಡೇಜ್, ಮೂತ್ರದ ನಳಿಕೆ ಬದಲಾವಣೆ, ಮೂಗಿನ ಮೂಲಕ ಆಹಾರ ಕೊಡುವ ನಳಿಕೆಯ ಬದಲಾವಣೆ, ರಕ್ತ ಪರೀಕ್ಷೆಗಾಗಿ ಸಂಗ್ರಹ ಇತ್ಯಾದಿ ಶುಶ್ರೂಷೆಗಳು, ಆಮ್ಲಜನಕದ ಸಿಲಿಂಡರ್ ಅಥವಾ ಆಕ್ಸಿಜನ್ ಕಾನ್ಸನ್‌ಟ್ರೇಟರ್ ಒದಗಿಸುವುದು, ಆಸ್ಪತ್ರೆಗೆ ರೋಗಿಯನ್ನು ಸಾಗಿಸುವುದು ಇತ್ಯಾದಿ ಸೇವೆಗಳನ್ನು ಮಿತದರದಲ್ಲಿ ಒದಗಿಸಲಿದೆ. ಸಮಾಜಬಾಂಧವರು ಅಗತ್ಯಬಿದ್ದಲ್ಲಿ ಈ ಸೇವೆಗಳನ್ನು ಪಡೆದುಕೊಳ್ಳಬಹುದು ಎಂದು ಸಂಸ್ಥೆಯ ವೈದ್ಯಕೀಯ ನಿರ್ದೇಶಕರಾದ ಡಾ| ವೈ.ಸುದರ್ಶನ ರಾವ್ ತಿಳಿಸಿದ್ದಾರೆ. ಸಂಪರ್ಕ ಸಂಖ್ಯೆ 7676799859, 8431022052, 9845136322

**– ಡಾ| ವೈ. ಸುದರ್ಶನ ರಾವ್ , ಇಂಚರ ಸರ್ಜಿಕಲ್ ಕ್ಲಿನಿಕ್, ಎ.ಜೆ ಆಲ್ಸೆ ರಸ್ತೆ, ಅಲಂಕಾರ್ ಥಿಯೇಟರ್ ಹಿಂಬದಿ , ಪ್ರಸಾದ ನೇತ್ರಾಲಯ ಎದುರು, ಉಡುಪಿ 576101**

## ಸುರತ್ಕಲ್ : FWF ಬೆಂಗಳೂರು ಕ್ರಿಕೆಟ್ ತಂಡ ಪ್ರಥಮ ಸ್ಥಾನಿ

ಸ್ಥಾನಿಕ ಬ್ರಾಹ್ಮಣ ಸಂಘ ಸುರತ್ಕಲ್ ಯುವ ವೇದಿಕೆಯ ವತಿಯಿಂದ ಸ್ಥಾನಿಕ ಸಮಾಜದ ಯುವಕರಿಗೆ 8ನೇ ವರ್ಷದ ಸೀಮಿತ ಓವರ್‌ಗಳ ಕ್ರಿಕೆಟ್ ಪಂದ್ಯಾಟ ಪಣಂಬೂರು NMPT ಮೈದಾನದಲ್ಲಿ 26–12–2021ರಂದು ನಡೆಸಲಾಯಿತು. ಈ ಪಂದ್ಯಾಟದಲ್ಲಿ ಸ್ಥಾನಿಕ ಸಮಾಜದ 10 ತಂಡಗಳು ಭಾಗವಹಿಸಿದ್ದವು. ಪ್ರಥಮ ಬಹುಮಾನವನ್ನು FWF ಬೆಂಗಳೂರು, ದ್ವಿತೀಯ ಬಹುಮಾನವನ್ನು ಸುರತ್ಕಲ್ ತಂಡವು ಪಡೆಯಿತು.


PRODUCTS ARE AVAILABLE AT ATTRACTIVE DISCOUNT PRICES




BATTERY PLANET
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990



GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022



SHREE KRISHNA
ELECCTRONICS & ELECTRICALS

Sri Balaji Complex, Shop No-G-7, Near KSRTC Bus Stand, Udupi - 576101.
City Towers, Service Bus Stand, Near Rao and Rao Circle, State Bank, Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala





ಡಾ| ವಿಜಯಾ ರಾವ್ ವೈ.ಬಿ
ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು

Dr. Vijaya Rao Y.B.
MBBS DGO (DNB)
Consultant Obst. & Gynaecologist
Reg. No. 34499
Mobile : 9481230608
Email : vijayayb12@gmail.com

Indrani Maternity Clinic, Aisiri Complex,
Near Railway Station Bus Stop, Kunjibettu Post, Udupi - 576 102


## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ| ಅಂಬಲಪಾಡಿ ಕೃಷ್ಣ ರಾವ್, ಡಾ| ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ| ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ| ಡಾ| ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ| ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ| ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ| ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್ ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ| ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ| ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ, ಶ್ರೀ ಪಿ.ಬಾಲಕೃಷ್ಣ ಬೆಂಗಳೂರು, ಎನ್.ಪದ್ಮನಾಭ ರಾವ್ ಬೆಂಗಳೂರು

# ಅಡುಗೆಯಲ್ಲಿ ಜೀವನಸಾರ....

– ವಿಜಿ ರಾವ್

ಇದೇನು! “ಜೀವನ ಸಾರು” ಎಂಬ ಹೊಸರುಚಿಯೇ ಎಂದು ಹುಬ್ಬೇರಿಸಬೇಡಿ. ಹೊಸರುಚಿಯಲ್ಲ, ಹೊಸದೃಷ್ಟಿ.

ಜೀವನದ ಸಾರವನ್ನು ನಾವು ಅಡಿಗೆ ಮನೆಯಲ್ಲೇ ನೋಡಬಹುದು, ತಿಳಿಯಬಹುದು. ಅದು ಹೇಗೆ?

“ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ” ಎಂಬ ಮಾತನ್ನು ಕೇಳದವರಿಲ್ಲ. ಅನುಭವಿಸದವರೂ ಇಲ್ಲ. ತಾಯಿ ತನ್ನ ಜೀವದ ಕುಡಿಯನ್ನು ಜನ್ಮಕೊಟ್ಟಲ್ಲಿಂದ ಆ ಜೀವವು ಸ್ವತಂತ್ರವಾಗಿ ಜೀವನ ನಡೆಸಲು ಶಕ್ತವಾಗುವವರೆಗೆ ಅಗತ್ಯವಿರುವುದನ್ನೆಲ್ಲಾ, ತನ್ನ ಕೈಲಾಗುವುದನ್ನೆಲ್ಲಾ “ನಿಸ್ವಾರ್ಥ”ವಾಗಿ ಮಾಡುತ್ತಾಳೆ. ಅವಳನ್ನು ಪ್ರಕೃತಿಯೇ ಆ ರೀತಿ ರೂಪಿಸಿರಲೂಬಹುದು. ಅಂತೂ ವ್ಯಕ್ತಿಯ ಜೀವನದಲ್ಲಿ ತಾಯಿಯೇ ಆಪ್ತಬಂಧು ಇನ್ನು ಆಹಾರದ ರುಚಿಯ ವಿಷಯಕ್ಕೆ ಬಂದರೆ, ಊಟವೋ ತಿಂಡಿಯೋ ಬಾಯಿಗಿಟ್ಟ ಕೂಡಲೇ ಅರಿವಿಗೆ ಬರುವುದು ಅದರ ಉಪ್ಪಿನ ಅಂಶ, ನಂತರ ಸಿಹಿ, ಕಾರ, ಕಹಿ ರುಚಿಗಳು. ಸಿಹಿ ಪಾಯಸಕ್ಕೂ ಒಂದು ಚಿಟಿಕೆ ಉಪ್ಪು ಹಾಕದಿದ್ದರೆ ರುಚಿ ಬರುವುದಿಲ್ಲ ಎಂಬುದು ಎಲ್ಲರಿಗೂ ತಿಳಿದಿದೆ. ನೀವು ಗಮನಿಸಿ, ಆಹಾರ ಎಷ್ಟೇ ಘಮಘಮಿಸುತ್ತಿದ್ದರೂ ಅದರಲ್ಲಿ ಉಪ್ಪು ಕಡಿಮೆ ಇದ್ದರೆ, ತಿಂದದ್ದು ತಿಂದಂತೆ ಆಗುವುದಿಲ್ಲ......... ಆದರೆ! ಅದೇ ಉಪ್ಪಿನ ಪ್ರಮಾಣ ಹದ ಮೀರಿದರೆ? ಸಾರಿನಲ್ಲಿ ಉಪ್ಪು ಹೆಚ್ಚಿದ್ದರೆ, ತಿನ್ನುವುದು ಕಷ್ಟಸಾಧ್ಯ, ಅಹಿಕತಕರ. ಅದಕ್ಕೆ ನೀರು ಬೆರೆಸಿ ಇಲ್ಲವೇ ಹುಳಿ–ಕಾರ ಸೇರಿಸಿ ಹದ ಮಾಡಿಕೊಳ್ಳುತ್ತೇವೆ! ಅಂದರೆ ಒಂದು ಹದ ಮೀರಿದರೆ, ಅತಿ ಜರೂರಿಯಾದ ಉಪ್ಪು ಕೂಡ “ಅಹಿತ”ವಾದ ಭಾವನೆ ಕೊಡುತ್ತದೆ. ನಾನೇನು ಹೇಳುತ್ತಿದ್ದೇನೆ? ತಾಯಿಯ ಪ್ರೀತಿ–ಜೀವಕ್ಕೂ, ಜೀವನಕ್ಕೂ ಆಧಾರವಾಗಿರುವ ಪ್ರೀತಿ–ಮೋಹವಾಗಬಾರದು. ಮಗ–ಮಗಳು 12–14 ವರ್ಷದವರಾಗುತ್ತಲೇ ಅವರ ಸೇವೆ ಮಾಡುವುದನ್ನು ಹಂತ ಹಂತವಾಗಿ ಕಡಿಮೆ ಮಾಡಬೇಕು. ಮಕ್ಕಳು ಮಾನಸಿಕವಾಗಿ, ದೈಹಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಸ್ವತಂತ್ರರಾಗಲು ಅನುವು ಮಾಡಿಕೊಡಬೇಕು. ಆಗ ಮಾತ್ರ ವ್ಯಕ್ತಿಯು ಪರಿಪೂರ್ಣವಾಗಿ ಬೆಳೆಯಲು ಸಾಧ್ಯ. ಹುಡುಗ–ಹುಡುಗಿಗೆ ಮದುವೆಯಾಗುವ ವರೆಗೂ ಬುದ್ಧಿ ಹೇಳುವುದು/ಅವರ ಕೆಲಸಗಳನ್ನು ಮಾಡುತ್ತಾ ಇರುವುದು ಸರಿಯಲ್ಲ. ಅದು ವ್ಯಕ್ತಿಯ ವೈವಾಹಿಕ ಜೀವನದಲ್ಲಿ ದುಷ್ಪರಿಣಾಮವನ್ನು ಉಂಟು ಮಾಡುತ್ತದೆ! ಹುಡುಗನಾದರೆ ಹೆಂಡತಿಯ ವ್ಯಕ್ತಿತ್ವದಲ್ಲಿ ತಾಯಿಯನ್ನು ಹುಡುಕಲು ಆರಂಭಿಸುತ್ತಾನೆ, ಎಂಥ ವಿರೋಧಾಭಾಸ! ಹಾಗೇ ಹುಡುಗಿಯೂ ಕೂಡ, ಮದುವೆಯ ನಂತರವೂ ಕಷ್ಟದ ಘಳಿಗೆಯಲ್ಲಿ ತಾಯಿ ಮನೆಯತ್ತ ಮುಖ ಮಾಡುತ್ತಾಳೆ. ವಿವಾಹಗಳೇಕೆ ಮುರಿದು ಬೀಳುತ್ತವೆ? ನಿಮಗೆ ತಿಳಿಯಿತೆ?

## ವಿಳಾಸ ಬದಲಾವಣೆ

**ಪಿ. ದಾಮೋದರ ರಾವ್**
“ಭಾಸ್ಕರ ನಿಲಯ”,
ಮನೆ.ನಂ. 4–203(A), ದಶರಥ ನಗರ,
8ನೇ ಕ್ರಾಸ್, ಮಣಿಪಾಲ – 576104.
ಮೊ : 9353392720

★★★★ ★★★★

**ಕೆ. ಜಯರಾಮ ಶಾಸ್ತ್ರಿ**
ಫ್ಲ್ಯಾಟ್ ನಂ. 301, 3 ನೇ ಮಹಡಿ,
ಗುರುಕೃಪಾ ಟವರ್ಸ್,
ಈಶ್ವರ ನಗರ, ಮಣಿಪಾಲ – 576104.
ಮೊ : 9844001163

## ಸ್ಥಾನಿಕ ಬ್ರಾಹ್ಮಣ ಪುರೋಹಿತ ಅರ್ಚಕ ಪರಿಪಾಲನ ಸಭಾಕ್ಕೆ ದೇಣಿಗೆ ವಿತರಣೆ

ಚಿಟ್ಪಾಡಿ ಸರ್ವಜ್ಞರಾಯರ ಸ್ವಗೃಹದಲ್ಲಿ 24.12.2021 ನೇ ಶುಕ್ರವಾರದಂದು ನಡೆದ ತ್ರಿಕಾಲ ಪೂಜೆಯ ಸಂದರ್ಭದಲ್ಲಿ ಸ್ಥಾನಿಕ ಬ್ರಾಹ್ಮಣ ಪುರೋಹಿತ ಅರ್ಚಕ ಪರಿಪಾಲನ ಸಭಾದ ಅಪತ್ಬಂಧು ನಿಧಿಗೆ ರೂ.10,000 ವನ್ನು ಸಂಘದ ಗೌರವಾಧ್ಯಕ್ಷರಾದ ವೇದಮೂರ್ತಿ ಭವಾನಿಶಂಕರ ಉಪಾಧ್ಯಾಯರಿಗೆ ಹಸ್ತಾಂತರಿಸಿದರು. ಶ್ರೀಮತಿ ಮತ್ತು ಶ್ರೀ ಸರ್ವಜ್ಞರಾವ್ ಮತ್ತು ಕುಟುಂಬದವರಿಗೆ ಜಗಜ್ಜನನಿ ಸಕಲ ಸನ್ಮಂಗಳವನ್ನು ನೀಡಲಿ. ಇವರಿಗೆ ನಮ್ಮ ಸಭಾದ ವತಿಯಿಂದ ಹೃತ್ಪೂರ್ವಕ ಅಭಿನಂದನೆಗಳು.

## ಬ್ರಹ್ಮೋಪದೇಶ

**ಚಿ। ಸಾತ್ವಿಕ್ ರಾವ್**

ಶ್ರೀಯುತ ಸುಧಾಕರ್ ರಾವ್ ಮತ್ತು ಶ್ರೀಮತಿ ಜ್ಯೋತಿಯವರ ಪೌತ್ರ ಹಾಗೂ ಶ್ರೀಮತಿ ಸುಪ್ರಿಯ ಮತ್ತು ಶ್ರೀ ಸಂಜಯ್ ರಾವ್ ದಂಪತಿಯ ಪುತ್ರ ಚಿ। ಸಾತ್ವಿಕ್ ರಾವ್‌ನ ಬ್ರಹ್ಮೋಪದೇಶವು ತಾ. 26.12.2021ರಂದು ಉಡುಪಿಯ ಕುಂಜಿಬೆಟ್ಟಿನಲ್ಲಿರುವ “ಶ್ರೀ ಶಾರದಾ ಮಂಟಪ”ದಲ್ಲಿ ಜರಗಿತು.

★★★★ ★★★★

**ಚಿ। ಅನುರಾಗ್ ರಾವ್**

ಶ್ರೀಮತಿ ಸುನಂದ ಮತ್ತು ಶ್ರೀ ಯು. ಶಿವಪ್ರಸಾದ್‌ರವರ ಪೌತ್ರ ಹಾಗೂ ಡಾ। ಅನುಪಮಾ ಮತ್ತು ಡಾ। ರಾಘವೇಂದ್ರ ದಂಪತಿಯ ಪುತ್ರ ಚಿ। ಅನುರಾಗ್ ರಾವ್‌ನ ಬ್ರಹ್ಮೋಪದೇಶವು ತಾ.26.12.2021ರಂದು ಮಂಗಳೂರಿನ ಸುಬ್ರಹ್ಮಣ್ಯ ಸಭೆಯ ಸಭಾಂಗಣದಲ್ಲಿ ಜರಗಿತು.

## ವೈವಾಹಿಕ ಜೀವನದ ಸುವರ್ಣ ಮಹೋತ್ಸವ

ಶ್ರೀಮತಿ ಮೋಹನಾ ಮತ್ತು ಶ್ರೀ ಲಕ್ಷ್ಮೀ ನಾರಾಯಣ ಶಾನುಭಾಗ್ ಇವರ ವೈವಾಹಿಕ ಸುವರ್ಣ ಮಹೋತ್ಸವವು ದಿನಾಂಕ 18.12.2021 ಶನಿವಾರ ಉಡುಪಿಯ ‘ಶಾರದಾ ಕಲ್ಯಾಣ’ ಮಂಟಪದಲ್ಲಿ ಜರಗಿತು.

## ಶುಭ ಜನನ

ಶ್ರೀ ದೀಪಕ್ ರಾವ್ ಮತ್ತು ಶ್ರೀಮತಿ ಪ್ರಿಯ ಭಾಗವತ್ ಇವರಿಗೆ ದಿನಾಂಕ 17.09.2021 ರಂದು ಹೆಣ್ಣು ಮಗುವಿನ (ಈಶಾನಿ) ಜನನವಾಗಿದೆ.

## ಉಗ್ರರಥ ಶಾಂತಿಃ

ಇಸ್ಲಾಂಪುರ ಸಾಂಗ್ಲಿ ಜಿಲ್ಲಾ ಮಹಾರಾಷ್ಟ್ರದಲ್ಲಿ ವ್ಯವಸಾಯ ಮಾಡಿಕೊಂಡಿರುವ ಶ್ರೀ ಸುಭಾಷ್ ರಾವ್ ಪತ್ನಿ ಆಶಾ ರಾವ್ ಇವರ 61ನೇ ಶಾಂತಿಯು ಇತ್ತೀಚೆಗೆ ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ನೆರವೇರಿತು. ಪುತ್ರಿಯರಾದ ಸ್ನೇಹಾ ಪ್ರಶಾಂತ್ ರಾವ್, ಅಂಕಿತಾ ರಾವ್ ಹಾಗೂ ಅಳಿಯ ಪ್ರಶಾಂತ್ ರಾವ್ ಮಾವ ಕುಡಲ್ ವೆಂಕಟರಮಣ ರಾವ್ ಹಾಗೂ ಸಮಾಜದ ತುಂಬಾ ಆಪ್ತರೂ ಮಿತ್ರರೂ ಹಾಗೂ ನಮ್ಮವರೇ ಪುರೋಹಿತರಾದ ಯಾಜಿ ನಿರಂಜನ ಭಟ್ ಇವರು ಆಶೀರ್ವಾದ ಮಾಡಿದರು.

## ಛತ್ರ ಛಾಯ

ಒಂಟಿಯೆಂದು ತಿಳಿಯಬೇಡ
ಆ ಮಿತ್ರನು ನಮ್ಮ ಜತೆಗಿರುವನು
ಹಿಡಿದುಕೊಂಡು ಛತ್ರ
ಅವನ ಛತ್ರ ಛಾಯ
ನಮ್ಮ ಮೇಲಿರಲು
ನಮಗೆ ಬಾರದೆಂದು ಖತ್ರ

–ಉ ರಾ ಕೆ


**“ತಲೇಕಿ ಶ್ರೀ ಶ್ರೀನಿವಾಸ ದೇವಸ್ಥಾನ” ಕಡಬ**

ಶ್ರೀ ಶ್ರೀ ಶ್ರೀ ಶೃಂಗೇರಿ ಪೀಠದ ಮಹಾಜಗದ್ಗುರುಗಳವರ ದಿವ್ಯ ಹಸ್ತದಿಂದ
ಪುನಃ ಪ್ರತಿಷ್ಠಾಪಿಸಲ್ಪಟ್ಟ ತಲೇಕಿ ಶ್ರೀ ಶ್ರೀನಿವಾಸ ದೇವಸ್ಥಾನದ

**35ನೇ ಪ್ರತಿಷ್ಠಾ ವಾರ್ಷಿಕೋತ್ಸವವು**

ಬ್ರಹ್ಮಶ್ರೀ ವಾಗೀಶ ತಂತ್ರಿಗಳ ನೇತೃತ್ವದಲ್ಲಿ ತಾರೀಕು 07.02.2022 ನೇ ಸೋಮವಾರ ರಥ ಸಪ್ತಮಿಯಂದು ಜರಗಲಿರುವುದು.
ಸಮಾಜ ಬಾಂಧವರೆಲ್ಲರೂ ಈ ದೇವತಾ ಕಾರ್ಯಗಳಲ್ಲಿ ಸಹಭಾಗಿಗಳಾಗಿ ವಿನಂತಿ.

**ಹರ್ಷಕುಮಾರ್ ಕೇದಿಗೆ ಮತ್ತು ಕುಂಬಾಟ್ ಕುಟುಂಬಸ್ಥರು**



*With Best Complimemts From*
SRI M. SHAILESH RAO Ph : 9448624324
B.E., Civil
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com





**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು





ಎಮ್. ದೇವಾನಂದ್ ಭಟ್ Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ



ಬೆಳ್ವಾಯಿ–574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655



ಕಾರ್ಕಳದಲ್ಲಿ ಪ್ರಥಮ
ತಾಜಾ ಹಾಗೂ ಉತ್ತಮ ಗುಣ ಮಟ್ಟದ ಎಲ್ಲಾ ರೀತಿಯ ಹಿಟ್ಟು ಒಂದೇ ಜಾಗದಲ್ಲಿ ಲಭ್ಯ.
ನಮ್ಮಲ್ಲಿ ಗೋಧಿ, ಜೋಳ, ಅಕ್ಕಿ, ರಾಗಿ ಹಿಟ್ಟು ಹಾಗೂ ಅಕ್ಕಿ ರವ ದೊರೆಯುತ್ತದೆ.
**ಪ್ರಕೃತಿ ಸ್ಟೋರ್ಸ್**
ಪ್ರಸಾದ್ ಭವನ (ವಿ. ಕೆ. ಡೆಕೋರೇಟರ್ಸ್ ಬಳಿ)
ಹೋಟೇಲ್ ಮಹಾಲಸಾ ಎದುರು, ತೆಳ್ಳಾರು ರಸ್ತೆ, ಕಾರ್ಕಳ
For The First Time We Are Introducing Fresh And Good Quality Of Rice, Ragi, Jowar & Wheat Flour Along With Rice Rava In Single Venue
Contact: Prakrithi Stores, Prasad Bhavana (Near: V. K. Decoratores), Opp: Hotel Mahalasa, Tellar Road, Karkala. Mob: 8296375933





**Buying and selling shares as easy as checking your emails**
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO’s

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)






**RAJESH POWER PRESS**
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

## ನಿಧನ



### ಶ್ರೀ ಸಾಂತೂರು ಸದಾಶಿವ ರಾವ್

ನಿವೃತ್ತ ಉಪನ್ಯಾಸಕರಾದ ಶ್ರೀ ಸಾಂತೂರು ಸದಾಶಿವ ರಾವ್ (87 ವರ್ಷ) ತಾ.09.12.2021ರಂದು ಸಾಂತೂರಿನ ತಮ್ಮ ಸ್ವಗೃಹದಲ್ಲಿ ನಿಧನರಾದರು. ಹಲವಾರು ವರ್ಷಗಳಿಂದ ಯಕ್ಷಗಾನ ಅರ್ಥಧಾರಿಯಾಗಿ, ಧಾರ್ಮಿಕ ಪ್ರವಚನಕಾರರಾಗಿ ಬಹುಮುಖ ಪ್ರತಿಭೆಯನ್ನು ಹೊಂದಿದ ಇವರು ಪತ್ನಿ, ಮೂವರು ಪುತ್ರರು, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

**** ****



### ಶ್ರೀಮತಿ ವೈ.ಪುಷ್ಪಲತಾ ರಾವ್

ಕೀರ್ತಿಶೇಷ ಎಲ್ಲೂರು ರಮಾನಂದ ರಾವ್ ಸಾಂಗ್ಲಿ ಇವರ ಧರ್ಮಪತ್ನಿಯಾದ ವೈ.ಪುಷ್ಪಲತಾ ರಾವ್ (76 ವರ್ಷ) ದಿನಾಂಕ 19.12.2021 ರಂದು ನಿಧನರಾದರು. ಮೃತರು ಓರ್ವ ಪುತ್ರ, ಪುತ್ರಿ ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ.

**** ****



### ಶ್ರೀ ರಾಜ್‌ಗೋಪಾಲ್ ರಾವ್

ಉಡುಪಿ ನಿವಾಸಿ ಶ್ರೀ ಇನ್ನಾ ಸಲ್ವಾನ ರಾಜ್‌ಗೋಪಾಲ್ ರಾವ್ (81 ವರ್ಷ) ಇವರು ತಮ್ಮ ಸ್ವಗೃಹದಲ್ಲಿ ದಿನಾಂಕ 25.12.2021 ರಂದು ನಿಧನರಾದರು. ಇವರು ಪತ್ನಿ ಶ್ರೀಮತಿ ಜಯಲಕ್ಷ್ಮೀ, ಓರ್ವ ಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

**** ****



### ಶ್ರೀಮತಿ ಭವಾನಿ

ದಿ.ಎಲ್ಲೂರು ರಾಮಕೃಷ್ಣರಾಯರ ಪತ್ನಿ ಶ್ರೀಮತಿ ಭವಾನಿ (88 ವರ್ಷ) ತಾ.28.12.2021 ರಂದು ನಿಧನರಾದರು. ಇವರು ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

**** ****



### ಶ್ರೀಮತಿ ವಿಜಯ ಆರ್.ರಾವ್

ಉಡುಪಿಯ ಬನ್ನಂಜೆ ನಿವಾಸಿ ಕಾರ್ಕಳದ ಕರ್ವಾಲಿನ ಶ್ರೀಮತಿ ವಿಜಯ ಆರ್.ರಾವ್ (80 ವರ್ಷ), ನಿವೃತ್ತ ಮುಖ್ಯ ಶಿಕ್ಷಕರಾಗಿದ್ದ ದಿ| ಕಬ್ಬಿನಾಲೆ ರಾಮಣ್ಣ ಹೆಬ್ಬಾರ್‌ರವರ ಪತ್ನಿ ತಾ.04.01.2022ರಂದು ನಿಧನ ಹೊಂದಿರುತ್ತಾರೆ. ಮೃತರು ಓರ್ವ ಪುತ್ರ, ಓರ್ವ ಪುತ್ರಿ, ಸಹೋದರ ವೈ.ಮನೋಹರ ಪ್ರಸಾದ್ ಕರ್ವಾಲು ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ.

**** ****



### ಶ್ರೀಮತಿ ಯಶೋಧ

ಪಾರೆಂಕಿ ಶ್ರೀ ಶಾಂತಾರಾಮ ಅಧಿಕಾರಿಯವರ ಪತ್ನಿ ಶ್ರೀಮತಿ ಯಶೋಧ (75 ವರ್ಷ) ಇವರು ತಾ. 05.01.2022ರಂದು ನಿಧನ ಹೊಂದಿರುತ್ತಾರೆ. ಮೃತರು ಓರ್ವ ಪುತ್ರ, ಓರ್ವ ಪುತ್ರಿ ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ.

**** ****



### ಶ್ರೀ ಸದಾನಂದ ಶ್ಯಾನುಭಾಗ್

ಕಾರ್ಕಳ ತೆಳ್ಳಾರು ಶ್ರೀ ಸದಾನಂದ ಶ್ಯಾನುಭಾಗ್ (76 ವರ್ಷ) ಇವರು ತಾ.03.01.2022ರಂದು ನಿಧನರಾದರು. ಮೃತರು ಪತ್ನಿ ಶ್ರೀಮತಿ ವತ್ಸಲಾ ಶ್ಯಾನುಭಾಗ್, ಇಬ್ಬರು ಪುತ್ರರು ಮತ್ತು ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ.

**** ****



### ಶ್ರೀಮತಿ ಅನಸೂಯ ಎಸ್.ರಾವ್

ಕಾರ್ಕಳ ಕರ್ವಾಲಿನ ನಿವೃತ್ತ ಮುಖ್ಯಶಿಕ್ಷಕಿ ಅನಸೂಯ ಎಸ್.ರಾವ್ ಬೆಂಗಳೂರಿನ ತನ್ನ ಮಗಳ ಮನೆಯಲ್ಲಿ ತಾ.03.01.2022ರಂದು ನಿಧನರಾದರು. ಮೃತರು ಮೂವರು ಪುತ್ರಿಯರು, ಸಹೋದರ ವೈ.ಮನೋಹರ ಪ್ರಸಾದ್ ಕರ್ವಾಲು ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ.

**** ****

### ಶ್ರೀ ಕೆ. ಶ್ರೀನಿವಾಸ ರಾವ್

ಪಿಲಾರು ಮೈಕೋಡಿ ಕೆ. ಶ್ರೀನಿವಾಸ ರಾವ್ (94 ವರ್ಷ) ಇವರು ತಮ್ಮ ಸ್ವಗೃಹದಲ್ಲಿ ದಿನಾಂಕ 10.12.2021 ರಂದು ನಿಧನರಾದರು.

**** ****

### ಶ್ರೀ ರಾಮಚಂದ್ರ ರಾವ್ ತೋಕೂರು

ರಾಮಚಂದ್ರ ರಾವ್ ತೋಕೂರು (ಬೊಕ್ಕಸ ಕುಟುಂಬ) ರವರು 14.12.2021 ರಂದು ವಯೋಸಹಜ ವೃದ್ಧಾಪ್ಯದಿಂದ ಶಿವೈಕ್ಯರಾಗಿರುತ್ತಾರೆ. ಅವರು 3 ಪುತ್ರಿಯರು ಮತ್ತು ಒಬ್ಬ ಪುತ್ರ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿರುತ್ತಾರೆ.


ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ. : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894


## ಶುಭ ವಿವಾಹ

ಪುತ್ತೂರಿನ ಮೇಲಿನ ಶ್ಯಾರ ಶ್ರೀಮತಿ ಜಯಲಕ್ಷ್ಮೀ ಮತ್ತು ಶ್ರೀ ಎನ್.ಎಸ್.ನರೇಂದ್ರ ರಾವ್ ಇವರ ಪುತ್ರ **ಚಿ.ಕಾರ್ತಿಕ್** ಹಾಗೂ ಮಧೂರು ಚೇನಕೋಡು ಶ್ರೀಮತಿ ಅನುಪಮಾ ಮತ್ತು ಶ್ರೀ ರವಿಶಂಕರ ಇವರ ಪುತ್ರಿ **ಚಿ.ಸೌ. ಅನೂಷಾ** ಇವರ ವಿವಾಹವು ತಾ.29.12.2021 ರಂದು ಮಧೂರು ಪರಕ್ಕಿಲ ಶ್ರೀ ಮಹಾದೇವ ಶಾಸ್ತಾ-ವಿನಾಯಕ ದೇವಸ್ಥಾನದ "ನಟರಾಜ ಕಲ್ಯಾಣ ಮಂಟಪ"ದಲ್ಲಿ ಜರಗಿತು.

**** ****

ಶ್ರೀ ಸುರೇಶ್ ರಾವ್ ಟಿ. ಮತ್ತು ಶ್ರೀಮತಿ ಶಶಿಕಲಾ ಇವರ ಪುತ್ರ **ಚಿ.ವಾಗೀಶ ರಾವ್ ಟಿ.** ಹಾಗೂ ಕೀರ್ತಿಶೇಷ ಶ್ರೀ ಶ್ರೀಧರ ಕೆ. ಮತ್ತು ಶ್ರೀಮತಿ ಆರ್.ಸುಧಾ ಇವರ ಪುತ್ರಿ **ಚಿ.ಸೌ. ಶಾರ್ವರಿ ಪಿ.ಎಸ್.** ಇವರ ವಿವಾಹವು ತಾ.08.12.2021 ರಂದು ಶ್ರೀರಂಗಪಟ್ಟಣ ದಲ್ಲಿರುವ "ಜೆ.ಎಂ. ಕನ್ವೆನ್ಷನ್ ಸೆಂಟರ್ ಹಾಲ್"ನಲ್ಲಿ ಜರಗಿತು.

**** ****

ಶ್ರೀ ಬನ್ನಂಜೆ ಶಿವರಾಜ ರಾವ್ ಮತ್ತು ಶ್ರೀಮತಿ ರಾಜೇಶ್ವರಿ ಇವರ ಪುತ್ರ **ಚಿ.ರಜತ್** ಹಾಗೂ ಶ್ರೀ ಎನ್.ಕುಮಾರಸ್ವಾಮಿ ಮತ್ತು ಶ್ರೀಮತಿ ಸಹನಾ ಇವರ ಪುತ್ರಿ **ಚಿ.ಸೌ. ಐಶ್ವರ್ಯಾ** ಇವರ ವಿವಾಹವು ತಾ. 05.12.2021 ರಂದು ಪುತ್ತೂರು "ಒಕ್ಕಲಿಗ ಗೌಡ ಸಭಾಭವನ" ದಲ್ಲಿ ಜರಗಿತು.

**** ****

ಶ್ರೀಮತಿ ಆಶಾ ಮತ್ತು ಶ್ರೀ ನಾಗರಾಜ ರಾವ್ ಎಲ್ಲೂರು ಇವರ ದ್ವಿತೀಯ ಪುತ್ರ **ಚಿ.ವ್ಯಾಸ ರಾವ್** ಮತ್ತು ಶ್ರೀಮತಿ ಜ್ಯೋತಿ ಮತ್ತು ಶ್ರೀ ಭಾಸ್ಕರ ಡಿ. ಇವರ ಪುತ್ರಿ **ಚಿ.ಸೌ.ನವಮಿ** ಇವರ ವಿವಾಹವು ತಾ. 13.12.2021 ರಂದು ಕಳಸದ ಶ್ರೀ ವೆಂಕಟರಮಣ ದೇವಸ್ಥಾನದ " ಜಿ.ಎಸ್.ಬಿ. ಸಭಾ ಭವನ"ದಲ್ಲಿ ಜರಗಿತು.

**** ****

ಗೋವಾದಲ್ಲಿ ವಾಸ್ತವ್ಯವಿರುವ ಪಾಂಡೇಶ್ವರ ಶ್ರೀಮತಿ ಹೇಮಲತಾ ಮತ್ತು ಶ್ರೀ ಪಿ.ವಿ.ರಮೇಶ್ ಇವರ ಪುತ್ರ **ಚಿ. ನಿರಂಜನ್** ಹಾಗೂ ಶ್ರೀಮತಿ ಪದ್ಮಜಾ ಮತ್ತು ಶ್ರೀ ಮಹಾವೀರ ಜಗದೇವ ಇವರ ಪುತ್ರಿ **ಚಿ.ಸೌ.ಪ್ರೀತಿ** ಇವರ ವಿವಾಹ ಸಮಾರಂಭವು ತಾ.19.12.2021ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಜರಗಿತು.

## ಗೃಹಪ್ರವೇಶ

ಶ್ರೀ ಕೆ. ಉಮೇಶ ರಾವ್‌ರವರ ಪುತ್ರಿ ಶ್ರೀಮತಿ ಪ್ರಿಯಾಂಕಾ ಹಾಗೂ ಶ್ರೀ ಶ್ಯಾಮ ಭಾರದ್ವಾಜ್ ದಂಪತಿಗಳು ತಮ್ಮ ನೂತನ ಮನೆಯ ಗೃಹ ಪ್ರವೇಶವನ್ನು ತಾ.07.11.2021ರಂದು ಕಲ್ಸಂಕ ಅಂಬಾಗಿಲು ರಸ್ತೆಯ ಮಾಂಡವಿ ಪ್ರಿನ್ಸ್ ಪ್ಯಾಲೇಸ್‌ನಲ್ಲಿ ನೆರವೇರಿಸಿದರು.

### ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ }

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "ಪಾರಾಯಣ" ಸಂಜೆ ಗಂಟೆ 4-30ರಿಂದ

**ತಾ.21-01-2022 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.29-01-2022 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.23-01-2021 ಮತ್ತು ತಾ.05-02-2022 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಮಕರ ಮಾಸದ ವಿಶೇಷ ದಿನಗಳು

| | | | |
|---|---|---|---|
| 17-01-2022 | ಹುಣ್ಣಿಮೆ | 28-01-2022 | ಸರ್ವೈಕಾದಶಿ |
| 18-01-2022 | ಹೇಮಂತ ಋತು ಪುಷ್ಯ ಮಾಸದ ಕೃಷ್ಣ ಪಕ್ಷಾರಂಭ, ಉಡುಪಿ ಶ್ರೀಕೃಷ್ಣಾಪುರ ಮಠ ಪರ್ಯಾಯೋತ್ಸವ | 01-02-2022 | ಅಮಾವಾಸ್ಯೆ |
| | | 02-02-2022 | ಶಿಶಿರ ಋತು ಮಾಘ ಮಾಸದ ಶುಕ್ಲ ಪಕ್ಷಾರಂಭ |
| | | 12-02-2022 | ಸರ್ವೈಕಾದಶಿ, ಕುಂಭ ಸಂಕ್ರಮಣ |
| | | 16-02-2022 | ಹುಣ್ಣಿಮೆ |
| 21-01-2022 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9.24 | 17-02-2022 | ಶಿಶಿರ ಋತು ಮಾಘ ಮಾಸದ ಶುಕ್ಲ ಪಕ್ಷಾರಂಭ |


Ph : 98459 92859

**Ganesh Hebbar & Associates**

CHARTERED ACCOUNTANT

S.M.S.P. Complex, Udupi - 576 101.



ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯೆಲೆಸ್ಟೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.

ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

## ಉಡುಪಿ ಶ್ರೀಕೃಷ್ಣ ಎಲೆಕ್ಟ್ರಾನಿಕ್ಸ್ ಶೋರೂಂ ಉದ್ಘಾಟನೆ



ನಗರದ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣ ಬಳಿಯ ಶ್ರೀ ಕೃಷ್ಣ ಕೃಪಾ ಸಂಕೀರ್ಣದಲ್ಲಿದ್ದ ಶ್ರೀಕೃಷ್ಣ ಎಲೆಕ್ಟ್ರಾನಿಕ್ಸ್ ತನ್ನ 15 ನೇ ವರ್ಷದ ಸಂಭ್ರಮಾಚರಣೆ ಪ್ರಯುಕ್ತ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣ ಬಳಿಯ ಬಾಲಾಜಿ ಕಾಂಪ್ಲೆಕ್ಸ್‌ಗೆ ಸ್ಥಳಾಂತರಗೊಂಡು ಇತ್ತೀಚೆಗೆ ಉದ್ಘಾಟನೆಗೊಂಡಿತು. ಆಧುನಿಕ ಸವಲತ್ತುಗಳನ್ನು ಹೊಂದಿದ್ದ ವಿಶಾಲವಾದ ಶೋರೂಮನ್ನು ಪದ್ಮಾವತಿ ಮತ್ತು ಗೋಪಾಲಕೃಷ್ಣ ರಾವ್ ಅವರು ಉದ್ಘಾಟಿಸಿ ಶುಭ ಹಾರೈಸಿದರು. ಮಳಿಗೆಯ ಮಾಲಕ ನವೀನ್ ಕುಮಾರ್ ಅವರು, ವಿಶೇಷ ಆಫರ್ ನೀಡಿ 32" ಟಿವಿ ವಿದ್ ಹೋಮ್ ಥಿಯೇಟರ್ 11,999 ರೂ. ದರದಲ್ಲಿ ದೊರೆಯಲಿದೆ. ಎಲ್ಲಾ ಬಗೆಯ ಎಲೆಕ್ಟ್ರಾನಿಕ್ಸ್ ಸಾಮಾಗ್ರಿಗಳು, ಬಿಡಿಭಾಗಗಳು ದೊರೆಯಲಿರುವ ಇಲ್ಲಿ ಎಲ್ಲಾ ರೀತಿಯ ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ರಿಪೇರಿ ಮಾಡಿಕೊಡಲಾಗುವುದು ಎಂದು ತಿಳಿಸಿದರು.

ಸೂರ್ಯನಾರಾಯಣ ಶ್ಯಾನುಭೋಗ್, ಭಾಗೀರಥಿ ಶ್ಯಾನುಭೋಗ್, ಸುಮಂಗಲಾ, ಮನೋಹರ, ಹೇಮಾ ಸುರೇಶ್ ರಾವ್, ವತ್ಸಲಾ ನವೀನ್ ಕುಮಾರ್ ಉಪಸ್ಥಿತರಿದ್ದರು.

## ವಾಣಿಜ್ಯ ಸಂಕೀರ್ಣ, ಗೃಹ ಹಾಗೂ ಉದ್ದಿಮೆ ಶುಭಾರಂಭ



ಬೆಂಗಳೂರು ಕೊತ್ತನೂರು ಮುಖ್ಯರಸ್ತೆ, ಕೃಷ್ಣನಗರದಲ್ಲಿ ಶ್ರೀಮತಿ ರೂಪಾರಾಣಿ ಮತ್ತು ಶ್ರೀ ವಿದ್ಯಾಧರ ರಾವ್ ಹೊಸ್ಕೋಟೆ ಇವರು ನಿರ್ಮಿಸಿದ ನೂತನ ಗೃಹ "ಈಶನಿಲಯ" ಮತ್ತು ರಾವ್ ಪಾರ್ಟಿಹಾಲ್" ಹಾಗೂ "ರಾವ್ ವಾಣಿಜ್ಯ ಸಂಕೀರ್ಣ"ವು ಕಳೆದ ತಾ.15-02-2021 ಶುಭಾರಂಭ ಗೊಂಡಿದ್ದು, ಅಲ್ಲಿ ಇವರ ಸ್ವಂತ ಉದ್ದಿಮೆ "ಉಡುಪಿ ಐಸ್‌ಕ್ರೀಂ" ನ ಶುಭಾರಂಭವು ತಾ. 13-12-2021 ರಂದು ಶ್ರೀ ಮಂಟಪ ಪ್ರಭಾಕರ ಉಪಾಧ್ಯಾಯ, "ಮಂಟಪ ಐಸ್‌ಕ್ರೀಂ" ಬೆಂಗಳೂರು ಇವರ ಶುಭಾಶೀರ್ವಾದದಿಂದ ಜರಗಿತು. ಧಾರ್ಮಿಕ ಕಾರ್ಯಕ್ರಮಗಳ ನಂತರ ದೀಪ ಪ್ರಜ್ವಲನೆಯನ್ನು ಇವರ ಜತೆ 20 ವರ್ಷದಿಂದ ಸಹದ್ಯೋಗಿಯಾಗಿರುವ ಶ್ರೀ ಅರುಣ ಕುಮಾರ್, ಹೊಸ್ಕೋಟೆ ಮತ್ತು 15 ವರ್ಷದಿಂದ ಸಹದ್ಯೋಗಿಯಾಗಿರುವ ಶ್ರೀಮೂರ್ತಿ, ಶಿರಸಿ ಹಾಗೂ ಶ್ರೀ ರಾಜೇಶ ಇವರು ಆಗಮಿಸಿದ ಬಂಧು ಮಿತ್ರರ ಮತ್ತು ಗ್ರಾಹಕರ ಸಮಕ್ಷಮದಲ್ಲಿ ನೆರವೇರಿಸಿದರು. ಪುರೋಹಿತರು ಶುಭಾಶೀರ್ವಾದ ನೀಡಿದರು. ಪ್ರಾರಂಭದಲ್ಲಿ ಬಾರಕೂರು ರಾಮಚಂದ್ರರಾವ್ ಪ್ರಸ್ತಾವನೆ ಗೈದು, ಕಾರ್ಯಕ್ರಮ ನಿರ್ವಹಿಸಿ ಕೊನೆಯಲ್ಲಿ ವಂದಿಸಿದರು. ಆಗಮಿಸಿದ ಸರ್ವರಿಗೂ ಶ್ರೀ ವಿದ್ಯಾಧರ ರಾವ್ ದಂಪತಿಗಳು ಊಟೋಪಚಾರವನ್ನು ನೀಡಿ ಸತ್ಕರಿಸಿದರು.

### ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ, ಬೆಳ್ತಂಗಡಿ ಇದರ "ರಜತ ಸಂಭ್ರಮ"

## ವಿಪ್ರ ಭಜನಾ ಸಾಮ್ರಾಟ್ ಭಜನಾ ಸ್ಪರ್ಧೆ ಸಂಪನ್ನ



ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ, ಬೆಳ್ತಂಗಡಿ ಇದರ ರಜತ ಸಂಭ್ರಮದ ಅಂಗವಾಗಿ ದಿನಾಂಕ 01.01.2022 ನೇ ಶನಿವಾರದಂದು ಬೆಳಿಗ್ಗೆ ಗಂಟೆ 9.00ಕ್ಕೆ ಆರಂಭವಾದ ವಿಪ್ರ ಭಜನಾ ಸಾಮ್ರಾಟ್ ಭಜನಾ ಸ್ಪರ್ಧೆಯು ಸಂಜೆ 6.00 ರವರೆಗೆ ನಡೆದು ಸಂಪನ್ನಗೊಂಡಿತು. ಬ್ರಾಹ್ಮಣ ಸಮಾಜದ ಬೆಳ್ತಂಗಡಿ (4), ಬಂಟ್ವಾಳ (1), ಪುತ್ತೂರು (1), ಸುಳ್ಯ (1), ಮಂಗಳೂರು (1), ಮೂಡುಬಿದಿರೆ (1), ಕಾರ್ಕಳ (1), ಉಡುಪಿ (1), ಬ್ರಹ್ಮಾವರ (1), ಕುಂದಾಪುರ (1), ಕರಾಡ ಬ್ರಾಹ್ಮಣರ ತಂಡ (1), ಹವ್ಯಕ (1), ಚಿತ್ಪಾವನ (3), ಕೋಟ ಬ್ರಾಹ್ಮಣರ ತಂಡ (1), ಶಿವಳ್ಳಿ (3) ವಿವಿಧ ವರ್ಗಗಳ 22 ಭಜನಾ ತಂಡಗಳು ಭಾಗವಹಿಸಿದ್ದು ಧರ್ಮಸ್ಥಳ ಜನನಿ ಭಜನಾತಂಡ ಪ್ರಥಮ ಸ್ಥಾನಗಳಿಸಿ ಶ್ರೀ ಬಿ.ಕೆ. ಧನಂಜಯ ರಾವ್ ದಂಪತಿಗಳು ಪ್ರಾಯೋಜಿಸಿದ ರೂ. 20,000 ಮೊತ್ತ ಮತ್ತು ಶೀಲ್ಡ್‌ನ್ನು ತನ್ನದಾಗಿಸಿಕೊಂಡಿತು. ಮೂಡುಬಿದಿರೆಯ ಆದಿಶಂಕರ ಮಹಿಳಾ ಭಜನಾ ಮಂಡಳಿ ದ್ವಿತೀಯ ಸ್ಥಾನವನ್ನು ತನ್ನ ಬಗಲಿಗೆ ಹಾಕಿಕೊಳ್ಳುವ ಮೂಲಕ ಶ್ರೀಮತಿ ಶಾಂತಾ ಸುರೇಶ್‌ರವರು ಪ್ರಾಯೋಜಿಸಿದ ರೂ.15,000 ಮತ್ತು ಟ್ರೋಫಿಯನ್ನು ತನ್ನದಾಗಿಸಿ ಕೊಂಡಿತು. ಭಜನಾಂತರಂಗ ಭಜನಾ ಸಂಘ, ದರ್ಬೆತಡ್ಕ (ಪುರುಷರ ತಂಡ) ತಂಡವು ತೃತೀಯ ಸ್ಥಾನವನ್ನು ಪಡೆದು, ಶ್ರೀ ಸುಭಾಶ್ಚಂದ್ರ ಪಂಚವಟಿ ಇವರು ಪ್ರಾಯೋಜಿಸಿದ ರೂ. 10,000 ನಗದು ಬಹುಮಾನ ಹಾಗೂ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು. ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ಮೂಲಕ ವಿಪ್ರ ಸಮಾಜವು ಒಟ್ಟಾಗಿದೆ ಎಂಬುದನ್ನು ಸಮಾಜಕ್ಕೆ ತೋರಿಸಿಕೊಟ್ಟಿತು.

ಕಾರ್ಯಕ್ರಮದ ಆರಂಭದಲ್ಲಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾದ ಅಧ್ಯಕ್ಷರಾದ ಪಿ. ರಾಧಾಕೃಷ್ಣ ರಾವ್ ಅಧ್ಯಕ್ಷತೆ ವಹಿಸಿ ಎಲ್ಲರನ್ನು ಸ್ವಾಗತಿಸಿದರು. ಪೂರ್ವಾಧ್ಯಕ್ಷರಾದ ಶ್ರೀಪತಿ ರಾವ್, ಬಿ.ಕೆ. ಧನಂಜಯ ರಾವ್, ಅರುಣ್ ಕುಮಾರ್ ಎಂ.ಎಸ್., ದಿನೇಶ್ ಕುಮಾರ್ ಎಂ.ಎಸ್., ಮಹಿಳಾ ವೇದಿಕೆ ಅಧ್ಯಕ್ಷೆ ಮಮತಾ ಹರೀಶ್ ರಾವ್, ಯುವ ವೇದಿಕೆ ಅಧ್ಯಕ್ಷ ಪವನ್ ಕುಮಾರ್ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಹುತಾತ್ಮರಾದ ಬಿಪಿನ್ ರಾವತ್ ಹಾಗೂ ಸೈನಿಕರಿಗೆ ಪುಷ್ಪಾರ್ಚನೆ ಮಾಡಿದರು. ನಿವೃತ್ತ ಮೇಜರ್ ಜನರಲ್ ಎಂ.ವಿ.ಭಟ್ ವಿಪ್ರ ಭಜನಾ ಸಾಮ್ರಾಟ್ ಉದ್ಘಾಟಿಸಿದರು. ಶಾಸಕ ಹರೀಶ್ ಪೂಂಜ, ಕೂಟಮಹಾಜಗತ್ತಿನ ವೆಂಕಟ್ರಮಣ ರಾವ್, ಚಿತ್ಪಾವನ ಬಳಗದ ಗೋವಿಂದ ದಾಮ್ಲೆ, ಕಸಪಾ ಜಿಲ್ಲಾಧ್ಯಕ್ಷ ಡಾ.ಎಂ.ಪಿ.ಶ್ರೀನಾಥ್ ಮತ್ತಿತರರು ಉಪಸ್ಥಿತರಿದ್ದರು.

HARIKRISHNA DIGITALS
5-244-A1, SRIRANGA, First Floor, V. P. Nagar, 3rd Main, Kunjibettu Post - 576102, Udupi District
WE UNDERTAKE
* All types Outdoor and Indoor Photography & Videography
* Pre-wedding shoot * Post-wedding shoot * Passport Photography
* Photo Frames * Digital album creations
* Digitalisation of Old album
* Athorised Udayavani Advertisement Agency
* Offset, Screen, Digital & Banner Printing
* All types of Invitations * Project works of Schools & Colleges
* Book design & printing * Visiting cards
* A4 and A3 Black-White and Colour Printing and Xerox
+91 94487 24161, +91 94816 10371, +91 7019367390 E-mail : harikrishnadigitals2003@gmail.com



Dr. Sanath S. Rao
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com
JALAJA SKIN CLINIC
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

With Best Compliments From :
BUILDING DREAMS, ENHANCING LIVES.



NAKSHATRA — GANDHINAGAR —
SOLITAIRE — HATHILL, —
HABITAT ONE 54 — DEREBAIL —
ANANTESSH — CAR STREET, —
Land Trades® BUILDERS & DEVELOPERS
BUILDING TRUST, DELIVERING VALUE
MANGALURU'S LEADING REAL ESTATE COMPANY
RESIDENTIAL | COMMERCIAL | PLOTS
For More Details : 8882 777 444 | 0824 2425424, 2423866 | www.landtrades.in
Follow us on :



## ಶ್ರೀಮತಿ ಸಾವಿತ್ರಿ ಮನೋಹರರಿಗೆ ಪ್ರಶಸ್ತಿ

"ಭಾರತೀಯ ಸೇವಾ ಸಮಿತಿ (ರಿ). ಬೆಂಗಳೂರು ವತಿಯಿಂದ ರಾಷ್ಟ್ರಕವಿ ಕುವೆಂಪುರವರ 118ನೇ ಜಯಂತಿ ಮತ್ತು ವಿಶ್ವ ಮಾನವ ದಿನಾಚರಣೆ ಪ್ರಯುಕ್ತ ಆಯೋಜಿಸಿದ ಪ್ರಶಸ್ತಿ ಸಮಾರಂಭದಲ್ಲಿ ಹಲವಾರು ಪ್ರಶಸ್ತಿಗಳನ್ನು ಗಳಿಸಿಕೊಂಡಿರುವ ಸಾಧಕಿ ಕಾರ್ಕಳದ ಶ್ರೀಮತಿ ಸಾವಿತ್ರಿ ಮನೋಹರ ಇವರಿಗೆ ಸಮಾಜಸೇವೆ ಕ್ಷೇತ್ರಕ್ಕೆ ರಾಷ್ಟ್ರಕವಿ ಕುವೆಂಪು ಸದ್ಭಾವನಾ ಪ್ರಶಸ್ತಿ ಗೌರವ ದೊರೆತಿದೆ."

ಶ್ರೀ ಶಾರದಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ, ಉಡುಪಿ ಇದರ ವಾರ್ಷಿಕ ಮಹಾಸಭೆ 20–11–2021ನೇ ಶನಿವಾರ ಮಧ್ಯಾಹ್ನ ಭೂವರಾಹ ಸಂಕೀರ್ಣದ ಸಭಾಂಗಣದಲ್ಲಿ ನಡೆಯಿತು. ಸಂಘದ ಅಧ್ಯಕ್ಷರಾದ ಎಮ್. ಸದಾನಂದ ರಾವ್, ಉಪಾಧ್ಯಕ್ಷರಾದ ಯು.ಅರವಿಂದ್ ಕುಮಾರ್, ನಿರ್ದೇಶಕರಾದ ಯು. ಪ್ರಫುಲ್‌ಚಂದ್ರ ರಾವ್, ಕೃಷ್ಣಕುಮಾರ್ ಮಟ್ಟು, ಬಿ. ಜಯರಾಮ್ ರಾವ್, ವೈ.ಮೋಹನ್ ರಾವ್, ಕೆ. ಗಣೇಶ್ ರಾವ್, ಬಿ. ಕೃಷ್ಣಮೂರ್ತಿ ರಾವ್, ವೈ. ವಿಠಲ್ ರಾವ್, ಎಂ. ಪದ್ಮಾನಂದ ರಾವ್, ಹರಿಣಾಕ್ಷಿ ಎನ್. ರಾವ್, ವೇದಾವತಿ ಡಿ. ರಾವ್, ಸಲಹೆಗಾರರಾದ ಎಂ.ಕೆ. ದಿವಾಕರ್ ರಾವ್, ಉದಯ ಬಿ. ರಾವ್ ಅಲ್ಲದೇ ಕಾರ್ಯದರ್ಶಿಗಳಾದ ಪಟ್ಟಾಭಿರಾಮ ರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.


## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
“ಗೃಹ ಸಾಲ”
ಸಂಘದ ಪ್ರಾಥಮಿಕ ಸದಸ್ಯರಿಗೆ 10.00%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 11.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011–12ರಿಂದ 2016–17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.


**ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ**

ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ


## ಬ್ರಹ್ಮೋಪದೇಶ

### ಚಿ| ಸಾತ್ವಿಕ್ ರಾವ್





ತಾ.26–12–2021ರಂದು ಉಡುಪಿ ಕುಂಜಿಬೆಟ್ಟಿನ ‘ಶ್ರೀ ಶಾರದಾ ಮಂಟಪ’ದಲ್ಲಿ ಜರುಗಿದ **ಬ್ರಹ್ಮೋಪದೇಶ** ಕಾರ್ಯಕ್ರಮಕ್ಕೆ ಆಗಮಿಸಿ, ವಟುವನ್ನು ಹರಸಿದ ತಮಗೆಲ್ಲರಿಗೂ ಕೃತಜ್ಞತೆಗಳು

ಶ್ರೀಮತಿ ಜ್ಯೋತಿ ಮತ್ತು ಶ್ರೀ ಕೆ. ಸುಧಾಕರ್ ರಾವ್, ಕುಂಜಿಬೆಟ್ಟು, ಉಡುಪಿ
ಶ್ರೀಮತಿ ಸುಪ್ರಿಯಾ ಮತ್ತು ಶ್ರೀ ಸಂಜಯ ರಾವ್, USA
ಶ್ರೀಮತಿ ಚಂದ್ರಾವತಿ ಮತ್ತು ಶ್ರೀ ಹೆಚ್. ಸದಾಶಿವ ರಾವ್, ಪುತ್ತೂರು
ಶ್ರೀಮತಿ ಸುಪ್ರಿತಾ ಮತ್ತು ಶ್ರೀ ಹೆಚ್. ಸುದರ್ಶನ್ ರಾವ್, UK
ಅನಿಕ್ ಮತ್ತು ಅನ್ವಿಕ್
ಶ್ರೀಮತಿ ಸೀಮಾ ಮತ್ತು ಶ್ರೀ ಜಯಂತ್ ರಾಜ್, ಬೆಂಗಳೂರು
ಪ್ರಣವ್ ಮತ್ತು ಪ್ರಮಿತಿ

## ವೈವಾಹಿಕ ಸುವರ್ಣ ಮಹೋತ್ಸವದ ಶುಭಾಶಯಗಳು



**ಶ್ರೀಮತಿ ಮೋಹನಾ ಮತ್ತು**
**ಶ್ರೀ ಲಕ್ಷ್ಮೀನಾರಾಯಣ ಶಾನುಭಾಗ್**

ತಾ.18–12–2021 ಶನಿವಾರ
ಉಡುಪಿ ಕುಂಜಿಬೆಟ್ಟಿನ ‘ಶ್ರೀ ಶಾರದಾ ಮಂಟಪ’ದಲ್ಲಿ
**ಸುವರ್ಣ ವಿವಾಹ ವಾರ್ಷಿಕ ಮಹೋತ್ಸವವು** ಜರಗಿತು.
ಸ್ವರ್ಣ ಸೇತುಬಂಧದಲ್ಲಿ ಭಾಗಿಯಾದ ಎಲ್ಲರಿಗೂ
ವಿನಯಪೂರ್ವಕ ಕೃತಜ್ಞತೆಗಳನ್ನು ಕೋರುವ,



**ಶ್ರೀಮತಿ ಜ್ಯೋತಿ ಮತ್ತು ಶ್ರೀ ಹರ್ಷವರ್ಧನ**
**ಶ್ರೀಮತಿ ಸಂಗೀತಾ ಮತ್ತು ಶ್ರೀ ಚೈತ್ರ ಕುಮಾರ್**
**ಶ್ರೀಮತಿ ಚೈತನ್ಯ ಮತ್ತು ಶ್ರೀ ರಮೇಶ್ ರಾವ್**
**ಮಧುರ ರಾವ್, ಕೀರ್ತನ್ ರಾವ್,**
**ಅದ್ವೈತ್, ಅರ್ಜುನ್, ದೃಷ್ಟಿ, ಧ್ರುವ**

Owned, Published & Edited by : Sri Y. Muralikrishna Rao onbehalf of Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 2958444
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org